ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
**Bangalore Development Authority**

000379

ಸಂಖ್ಯೆ: ಸಂಖ್ಯೆ: ಬೆಂಅಪ್ರಾ/ನಯೋಸ/CLU-72/2020-21/ 872 . /2021-22
No.

ದಿನಾಂಕ: ದಿನಾಂಕ
Date : 30/08/2021

**[Comp No. 147113]**

# ಪ್ರಾರಂಭಿಕ ಪ್ರಮಾಣ ಪತ್ರ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರನ್ವಯ)

ವಿಷಯ:- ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ ಹೋಬಳಿ, ರಾಜಾನುಕುಂಟೆ ಗ್ರಾಮದ ಸರ್ವೆ ನಂ.20/2, 20/3, 20/4, 20/5, 21/1, 21/3, 28/2, 28/4, 28/5, 29/1, 30/1, 30/2, 30/3, 30/4 ಮತ್ತು 30/5 ರಲ್ಲಿನ 14 ಎಕರೆ 04 ಗುಂಟೆ (57060.20 ಚ.ಮೀ) ವಿಸ್ತೀರ್ಣದ ಪ್ರದೇಶವನ್ನು ಕೃಷಿ ವಲಯದಿಂದ ವಸತಿ ವಲಯಕ್ಕೆ ಕೆಟಿಸಿಪಿ ಕಾಯ್ದೆಯ 1961 ರ ಕಲಂ 14-A ರಡಿಯಲ್ಲಿ ಭೂಉಪಯೋಗ ಬದಲಾವಣೆ ಮಾಡುವ ಬಗ್ಗೆ.

ಉಲ್ಲೇಖ:-
1) ಅರ್ಜಿ ದಿನಾಂಕ 06.10.2020.
2) ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಠರಾವು ಸಂಖ್ಯೆ 23/2021, ದಿನಾಂಕ 16.02.2021.
3) ಈ ಕಛೇರಿಯ ಪತ್ರ ಸಂಖ್ಯೆ: ಬೆಂಅಪ್ರಾ/ನಯೋಸ/CLU-72/1726/2020-21 ದಿನಾಂಕ 22.03.2021.
4) ಸರ್ಕಾರದ ಆದೇಶ ಸಂಖ್ಯೆ: ನಅಇ 78 ಬೆಂಆಸೇ 2021 (ಇ) ಬೆಂಗಳೂರು ದಿನಾಂಕ 22.07.2021.
5) ಈ ಕಛೇರಿಯ ಪತ್ರ ಸಂಖ್ಯೆ: ಬೆಂಅಪ್ರಾ/ನಯೋಸ/CLU-72/688/2021-22 ದಿನಾಂಕ 31.07.2021.
6) ಅರ್ಜಿದಾರರು ದಿನಾಂಕ 16.08.2021 ರಂದು ಕೆನರಾ ಬ್ಯಾಂಕ್ ನ ಚಲನ್ ಸಂಖ್ಯೆ 3662 ರ ಮೂಲಕ ರೂ.27,60,580/- ಗಳನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡಿದ್ದು, ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದವರು ದಿನಾಂಕ 16.08.2021 ರಂದು ಹಣ ಸಂದಾಯವಾದ ಬಗ್ಗೆ ದೃಢೀಕರಿಸಿರುವುದು.

*** ***

**ಪ್ರಸ್ತಾವನೆ:**

ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ ಹೋಬಳಿ, ರಾಜಾನುಕುಂಟೆ ಗ್ರಾಮದ ಸರ್ವೆ ನಂ.20/2, 20/3, 20/4, 20/5, 21/1, 21/3, 28/2, 28/4, 28/5, 29/1, 30/1, 30/2, 30/3, 30/4 ಮತ್ತು 30/5 ರಲ್ಲಿನ 14 ಎಕರೆ 04 ಗುಂಟೆ (57060.20 ಚ.ಮೀ) ವಿಸ್ತೀರ್ಣದ ಪ್ರದೇಶವನ್ನು ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ ಕೆಟಿಸಿಪಿ ಕಾಯ್ದೆಯ 1961 ರ ಕಲಂ 14-A ರಡಿಯಲ್ಲಿ ಭೂಉಪಯೋಗ ಬದಲಾವಣೆ ಮಾಡಿಕೊಡುವಂತೆ ಉಲ್ಲೇಖ (1) ರಲ್ಲಿ ಕೋರಿದ್ದ ಪ್ರಸ್ತಾವನೆಯನ್ನು ಉಲ್ಲೇಖ (2) ರಂತೆ ನಡೆದ ಪ್ರಾಧಿಕಾರ ನಗರ ಯೋಜನಾ ಸಮಿತಿ ಸಭೆಯ ತೀರ್ಮಾನದಂತೆ ಉಲ್ಲೇಖ (3) ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

..2..

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು - 560 020.
T. Chowdaiah Road, Kumarapark West, Bangalore-560 020, Facsimile: 2334 5799, Website: www.bdabangalore.org

ಪ್ರಾಧಿಕಾರದಿಂದ ಸಲ್ಲಿಸಲಾಗಿದ್ದ ಭೂಉಪಯೋಗ ಬದಲಾವಣೆ ಪ್ರಸ್ತಾವನೆಗೆ ಉಲ್ಲೇಖ (4) ರ ಸರ್ಕಾರದ ಆದೇಶದಲ್ಲಿ ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ ಹೋಬಳಿ, ರಾಜಾನುಕುಂಟೆ ಗ್ರಾಮದ ಸರ್ವೆ ನಂ.20/2, 20/3, 20/4, 20/5, 21/1, 21/3, 28/2, 28/4, 28/5, 29/1, 30/1, 30/2, 30/3, 30/4 ಮತ್ತು 30/5 ರಲ್ಲಿನ 14 ಎಕರೆ 04 ಗುಂಟೆ (57060.20 ಚ.ಮೀ) ವಿಸ್ತೀರ್ಣದ ಪ್ರದೇಶವನ್ನು ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ ಕೆಲವೊಂದು ಷರತ್ತುಗಳಿಗೊಳಪಟ್ಟು ಭೂಉಪಯೋಗ ಬದಲಾವಣೆ ನೀಡಲು ಸರ್ಕಾರದ ಅನುಮತಿ ನೀಡಲಾಗಿದೆ.

ಪ್ರಶ್ನಿತ ಜಮೀನಿನ ಭೂಉಪಯೋಗ ಬದಲಾವಣೆ ಮಾಡುವ ಸಂಬಂಧ ಉಲ್ಲೇಖ (5) ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 18 ರಡಿಯಲ್ಲಿ ಉತ್ತಮತೆ ಶುಲ್ಕ, ಪರಿಶೀಲನಾ ಶುಲ್ಕ ಮತ್ತು ಜಿಎಸ್ ಟಿ ಸೇರಿ ಒಟ್ಟು ಮೊತ್ತ ರೂ.27,60,580/- ಗಳನ್ನು ಸಂದಾಯ ಮಾಡುವಂತೆ ಅರ್ಜಿದಾರರಿಗೆ ತಿಳಿಸಲಾಗಿತ್ತು. ಅದರಂತೆ ಅರ್ಜಿದಾರರು ದಿನಾಂಕ 16.08.2021 ರಂದು ರೂ.27,60,580/- ಗಳನ್ನು ಪ್ರಾಧಿಕಾರಕ್ಕೆ ಜಮಾ ಮಾಡಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ಸದಸ್ಯರ ವಿಭಾಗದವರು ದಿನಾಂಕ 16.08.2021 ರಂದು ಹಣ ಸಂದಾಯವಾಗಿರುವ ಬಗ್ಗೆ ದೃಢೀಕರಿಸಿ ವರದಿ ನೀಡಿರುತ್ತಾರೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14-A ರ ಅಡಿಯಲ್ಲಿ "ಕೃಷಿ" ವಲಯದಿಂದ "ವಸತಿ" ವಲಯಕ್ಕೆ ಭೂಉಪಯೋಗ ಬದಲಾವಣೆ ಬಗ್ಗೆ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ:

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ ಹೋಬಳಿ, ರಾಜಾನುಕುಂಟೆ ಗ್ರಾಮದ ಸರ್ವೆ ನಂ.20/2, 20/3, 20/4, 20/5, 21/1, 21/3, 28/2, 28/4, 28/5, 29/1, 30/1, 30/2, 30/3, 30/4 ಮತ್ತು 30/5 ರಲ್ಲಿನ 14 ಎಕರೆ 04 ಗುಂಟೆ (57060.20 ಚ.ಮೀ) ವಿಸ್ತೀರ್ಣದ ಪ್ರದೇಶವನ್ನು ಕೃಷಿ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14-A ಅಡಿಯಲ್ಲಿನ ಅವಕಾಶದನ್ವಯ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಲಾಗಿದೆ.

### ಷರತ್ತುಗಳು

1. ಪ್ರಶ್ನಿತ ಜಮೀನನ್ನು ಅಭಿವೃದ್ಧಿಪಡಿಸುವ ವೇಳೆ RMP-2015 ರಂತೆ ಹಾಲಿ ರಸ್ತೆಯನ್ನು 45.0ಮೀ ಅಗಲಕ್ಕೆ ವಿಸ್ತರಿಸುವುದಕ್ಕೆ ಅವಶ್ಯಕವಿರುವ ಜಮೀನನ್ನು ಪುಕ್ಕಟೆಯಾಗಿ ಹಸ್ತಾಂತರಿಸಬೇಕೆಂಬ ಷರತ್ತುಗೊಳಪಟ್ಟಿರುತ್ತದೆ.

2. ಅರ್ಜಿದಾರರು ಪ್ರಸ್ತಾವಿತ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮುನ್ನ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಡಿಯಲ್ಲಿ ವಲಯ ನಿಯಮಾವಳಿಗಳನ್ವಯ ವಿನ್ಯಾಸ/ ಅಭಿವೃದ್ಧಿ ನಕ್ಷೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕಡ್ಡಾಯವಾಗಿ ಅನುಮೋದನೆ ಪಡೆಯತಕ್ಕದ್ದು.
3. ಭೂಉಪಯೋಗ ಬದಲಾವಣೆಯು ಆಸ್ತಿಯ ಸ್ವತ್ತಿನ ಪ್ರತಿಪಾದನೆಗೆ ದಾಖಲೆಯೆಂದು ಸಲ್ಲಿಸುವುದಿಲ್ಲವೆಂದು, ಭೂಪಯೋಗ ಬದಲಾವಣೆ ಕುರಿತಂತೆ ಯಾವುದೇ ನ್ಯಾಯಾಲಯದ / ವಿಚಾರಣಾ ಪ್ರಾಧಿಕಾರದ ಅಂತಿಮ ಆದೇಶಕ್ಕೆ ಬದ್ಧರಿರುವುದಾಗಿ ಮತ್ತು ಭೂಉಪಯೋಗ ಬದಲಾವಣೆ ಸಂಬಂಧ ಪಾವತಿಸಲಾದ ಶುಲ್ಕಗಳನ್ನು ವಾಪಸ್ಸು ಕೇಳುವುದಿಲ್ಲವೆಂದು ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ಬದ್ಧರಾಗಿರತಕ್ಕದ್ದು.
4. ಪ್ರಸ್ತಾವಿತ ಜಮೀನುಗಳನ್ನು ಯಾವ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಜಾಗವನ್ನು ಉಪಯೋಗಿಸಿತಕ್ಕದ್ದು.
5. ಪ್ರಸ್ತಾವಿತ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆ ಆದೇಶ ಪಡೆದು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.
6. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಥವಾ ಯಾವುದೇ ಸಕ್ಷಮ ಪ್ರಾಧಿಕಾರಗಳು ಪ್ರಸ್ತಾಪಿಸಿರುವ ರಸ್ತೆಗಳು, ಪ್ರಶ್ನಿತ ಜಮೀನುಗಳ ಮೇಲೆ ಹಾದು ಹೋದಲ್ಲಿ, ರಸ್ತೆಗಾಗಿ ಜಾಗವನ್ನು ಪುಕ್ಕಟೆಯಾಗಿ ಬಿಟ್ಟುಕೊಡುವ ಷರತ್ತಿಗೆ ಒಳಪಟ್ಟಿರುತ್ತದೆ.
7. ಪ್ರಸ್ತಾವಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮುನ್ನ ಅಗತ್ಯವಿರುವ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು.
8. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರಾಕ್ಷೇಪಣಾ ಪತ್ರ ಪಡೆಯುವುದು ಹಾಗೂ ಅದರಲ್ಲಿನ ಷರತ್ತುಗಳನ್ನು ಪಾಲಿಸತಕ್ಕದ್ದು ಹಾಗೂ "ಮಳೆ ನೀರು ಕೊಯ್ಲು" ವ್ಯವಸ್ಥೆಯನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.
9. ಪ್ರಶ್ನಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ಪ್ರಶ್ನಿತ ಜಮೀನುಗಳ ಉಪಗಮನ ರಸ್ತೆಗೆ ಸೂಕ್ತ ಮಾರ್ಜಿನ್ ಅನ್ನು ಅಳವಡಿಸಿಕೊಳ್ಳತಕ್ಕದ್ದು ಹಾಗೂ ಮೂಲಭೂತ ಅಭಿವೃದ್ಧಿ ವೆಚ್ಚವನ್ನು ಅರ್ಜಿದಾರರೇ ಭರಿಸತಕ್ಕದ್ದು.
10. ಕೆರೆ, ನಾಲಾ ಹಳ್ಳಗಳಿಗೆ ಹೊಂದಿಕೊಂಡಂತೆ ಬರುವ ಪ್ರದೇಶದಲ್ಲಿ ವಲಯ ನಿಯಮಾನುಸಾರ ಬಫರ್ ಗಾಗಿ ಜಾಗವನ್ನು ಮೀಸಲಿಟ್ಟು ಯಥಾವತ್ತಾಗಿ ವಿನ್ಯಾಸ ನಕ್ಷೆಯಲ್ಲಿ ಅಳವಡಿಸಿ ಅಭಿವೃದ್ಧಿಪಡಿಸುವ ಷರತ್ತಿಗೊಳಪಟ್ಟಿರುತ್ತದೆ.
11. ಪ್ರಸ್ತಾವಿತ ಜಮೀನುಗಳ ಬಗ್ಗೆ ಯಾವುದೇ ಸಿವಿಲ್ ವ್ಯಾಜ್ಯ ತಂಟೆ ತಕರಾರುಗಳಿದ್ದಲ್ಲಿ, ಪ್ರಾಧಿಕಾರಕ್ಕೆ ಯಾವುದೇ ಜವಾಬ್ದಾರಿ ಇರುವುದಿಲ್ಲ ಮತ್ತು ನ್ಯಾಯಾಲಯಗಳು ನೀಡುವ ಆದೇಶಕ್ಕೆ ಬದ್ಧರಾಗಿರತಕ್ಕದ್ದು.

12. ಪ್ರಸ್ತಾವಿತ ಜಮೀನಿನ ಸಂಬಂಧವಾಗಿ ತಪ್ಪು ಮಾಹಿತಿ /ದಾಖಲಾತಿಗಳನ್ನು ನೀಡಿದ್ದಲ್ಲಿ ಅರ್ಜಿದಾರರೇ ನೇರ ಹೊಣೆಗಾರರಾಗುವುದಲ್ಲದೇ ಕೆಟಿಸಿಪಿ ಕಾಯ್ದೆ ಕಲಂ 76 (O) ರನ್ವಯ ಭೂ ಉಪಯೋಗದ ಆದೇಶ ರದ್ದಾಗುತ್ತದೆಂದು ತಿಳಿಯತಕ್ಕದ್ದು.
13. ಪ್ರಸ್ತಾವಿತ ಜಮೀನಿಗೆ ಹೊಂದಿಕೊಂಡಂತೆ ಯಾವುದಾದರೂ ಕೆರೆಯಿದ್ದಲ್ಲಿ ಸದರಿ ಕೆರೆಯ ಅಂಚಿನಿಂದ RMP-2015 ರ ವಲಯ ನಿಯಮಾವಳಿಯನ್ವಯ 30.0 ಮೀಟರ್ ಬಫರ್ ಕಾಯ್ದಿರಿಸತಕ್ಕದ್ದು.
14. ಸರ್ಕಾರದ ಆದೇಶ ಸಂಖ್ಯೆ: ನಅಇ 78 ಬೆಂಅಸೇ 2021 (ಇ) ಬೆಂಗಳೂರು ದಿನಾಂಕ 22.07.2021 ರಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.
15. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ / ಸಕ್ಷಮ ಪ್ರಾಧಿಕಾರ ವಿಧಿಸುವ ಇನ್ನಿತರೆ ನಿಬಂಧನೆಗಳನ್ನು ಪಾಲಿಸತಕ್ಕದ್ದು.

ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ ಹೋಬಳಿ, ರಾಜಾನುಕುಂಟೆ ಗ್ರಾಮದ ಸರ್ವೆ ನಂ.20/2, 20/3, 20/4, 20/5, 21/1, 21/3, 28/2, 28/4, 28/5, 29/1, 30/1, 30/2, 30/3, 30/4 ಮತ್ತು 30/5 ರಲ್ಲಿನ 14 ಎಕರೆ 04 ಗುಂಟೆ (57060.20 ಚ.ಮೀ) ವಿಸ್ತೀರ್ಣದ ಪ್ರದೇಶವನ್ನು ಕೃಷಿ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14-A ರಡಿಯಲ್ಲಿನ ಅವಕಾಶದನ್ವಯ ಈ ಮೇಲ್ಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಲಾಗಿದೆ.

27/08/2021

ಆಯುಕ್ತರು
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

ಇವರಿಗೆ,

ಶ್ರೀ.ಮನೋಜ್ ಕುಮಾರ್ ಬೈಡ್ ರವರು,
(ಶ್ರೀ.ಪವನ್ ಕುಮಾರ್ ಅಗರವಾಲ್ ಮತ್ತಿತರರ ಜಿಪಿಎದಾರರು)
ನಂ.302, ನಮರ್ತಾ ಅಪಾರ್ಟ್ ಮೆಂಟ್ಸ್,
54, 2ನೇ ಮುಖ್ಯರಸ್ತೆ, ಪಿ.ಜಿ.ಹಳ್ಳಿ, ಪಿ.ಎಸ್,
ವೈಯಾಲಿಕಾವಲ್ ಪೋಸ್ಟ್ ಆಫೀಸ್,
ಪಿ.ಜಿ.ಹಳ್ಳಿ, ಬೆಂಗಳೂರು-560 003.